OS No.2/2018 PW-1

<u>ದಿನಾಂಕ **05.03.2025** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಟಿ ಟಿ ವಕೀಲರಿಂದಃ</u>

ಬಡಾವಣೆಯ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾರಾಯಣಗೌಡರವರಿಂದ ನಾನು ಖುದ್ದಾಗಿ ಕ್ರಯ ಪಡೆದಿಲ್ಲ ಗೌರಮ್ಮರವರ ಅಸಲು ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಸಾಕ್ಷಿ ಮುಂದುವರೆದು ದೃಡೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ನನ್ನ ನಿವೇಶನ ಸಂಖೆ 9 ಆಗಿರುತ್ತದೆ. ಸರ್ವೆನಂಬರ್ 213 ರಲ್ಲಿ ನಾರಾಯಣಗೌಡರವರು 64 ನಿವೇಶನಗಳನ್ನು ಮಾಡಿದ್ದರು. 9 ನೇ ನಿವೇಶನ ಸರ್ವೆ ನಂಬರ್ ನ ಉತ್ತರ ದಿಕ್ಕಿಗೆ ಬರುತ್ತದೆ. ಈ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಕ್ರಯ ಪತ್ರದಲ್ಲಿ ತಿಳಿಸಿರುವ ಚೆಕ್ಕು ಬಂದಿಯೊಳಗೆ ನನ್ನ ಆಸ್ತಿ ಬರುತ್ತದೆ ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಕ್ರಯ ಪತ್ರ ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ನಾರಾಯಣಗೌಡರವರು ಪ್ರತಿವಾದಿಗೆ ಸರ್ವೆನಂಬರ್ 213 ರಲ್ಲಿ 20 ಗುಂಟೆಯನ್ನು ವಿಲ್ ಮೂಲಕ ಕೊಟ್ಟಿದ್ದಾರೆಂದರೆ ನನಗೆ ಗೊತ್ತಿಲ್ಲ. ಇದರಲ್ಲಿರುವ ಆಸ್ತಿ ಸರ್ವೆ ನಂಬರ್ ನ ಉತ್ತರ ದಿಕ್ಕಿನ ಪಶ್ಚಿಮದ ಕಡೆಗೆ ಬರುತ್ತದೆ ಎಂದರೆ ನಿಜ. ಈ ಆಸ್ತಿಗೂ ಮತ್ತು ದಾವಾ ಆಸ್ತಿಗೂ ಯಾವುದೇ ಸಂಬಂದವಿಲ್ಲ ಎಂದರೆ ಸುಳ್ಳು. ವಿಲ್ಲಿನ ಅಂಶಗಳು ಗೊತ್ತಿದೆ. ವಿಲ್ಲಿನಲ್ಲಿರುವ ಆಸ್ತಿಯ ಒಳಗಡೆ ದಾವಾ ಆಸ್ತಿ ಬರುವುದಿಲ್ಲ ಎಂದರೆ ಸುಳ್ಳು. ದಾವಾ ಆಸ್ತಿ ವಿಲ್ಲಿನ ಆಸ್ತಿಯ ಒಳಗಡೆ ಬರುತ್ತದೆ ಎಂದು ತೋರಿಸಲು ಕೊಟ್ಟಿಲ್ಲ. ಪ್ರತಿವಾದಿ ವಿಲ್ಲಿನಲ್ಲಿರುವ 20 ಗುಂಟೆ ಪ್ರದೇಶಕ್ಕೆ ತಂತಿ ಬೇಲಿ ಹಾಕಿಕೊಂಡಿರುತ್ತಾರೆಂದರೆ ಸಾಕ್ಷಿಯು ಹಾಕಿದ್ದರು ಈಗ ಇಲ್ಲ ಎಂದು ನುಡಿಯುತ್ತಾರೆ. ವಿಲ್ಲಿನಲ್ಲಿರುವ ಆಸ್ತಿ ಪ್ರತಿವಾದಿಯ ಹೆಸರಿಗೆ ಖಾತಾ ಆಗಿದೆ ಎಂದರೆ ನಿಜ. ಈ ಖಾತಾ ವಿರುದ್ದ ರೆವೆನ್ಯೂ ಇಲಾಖೆಯಲ್ಲಿ ಪ್ರಶ್ನೆ ಮಾಡಿಲ್ಲ. ನಾನು ದಾವಾ ಸ್ವತ್ತಿನಲ್ಲಿ ಸ್ವಾದೀನದಲ್ಲಿ ಇಲ್ಲ ಮತ್ತು ಅದನ್ನು ಕಬಳಿಸಲು

ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸುಳ್ಳು. ನಿಪಿ-9 ರ ಭಾವಚಿತ್ರಗಳು ದಾವಾ ಆಸ್ತಿಗೆ ಸಂಬಂದಪಟ್ಟಿದ್ದಲ್ಲ ಎಂದರೆ ಸುಳ್ಳು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.